ಕರ್ನಾಟಕ ಸರ್ಕಾರ

**ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ಹೊಸ ಸಾರ್ವಜನಿಕ ಕಛೇರಿಗಳು,**
**ನೃಪತುಂಗ ರಸ್ತೆ, ಬೆಂಗಳೂರು**

**ಸಂಖ್ಯೆ:ಸಿ5(1)ವರ್ಗ-01/2015-16** **ದಿನಾಂಕ :02-05-2015**

**ಅಧಿಕೃತ ಜ್ಞಾಪನ**

ವಿಷಯ: 2015-16ನೇ ಸಾಲಿನಲ್ಲಿ ಅಂತರ ಆಯುಕ್ತಾಲಯ ವರ್ಗಾವಣೆಗಳನ್ನು ಕೌನ್ಸಿಲಿಂಗ್ ಮೂಲಕ ಮಾಡುವ ಬಗ್ಗೆ.

ಉಲ್ಲೇಖ:
1. ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ 22 ಸೇನೌವ 2013 ದಿ:7-6-2013
2. ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ 22 ಸೇನೌವ 2013 ದಿ:14-6-2013
3. ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ 18 ಸೇನೌವ 2014 ಬೆಂಗಳೂರು ದಿ:6-2-2014
4. ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ 25 ಸೇನೌವ 2015 ಬೆಂಗಳೂರು **ದಿನಾಂಕ:20-04-2015**
5. ಈ ಕಛೇರಿಯ ಸುತ್ತೋಲೆ ಸಂಖ್ಯೆ:ಸಿ5(1)ವರ್ಗ-01/ ದಿನಾಂಕ:23-04-2015

**-*****-**

ಪ್ರಸ್ತಾವನೆ:-

ಉಲ್ಲೇಖ(1) ರಿಂದ (3) ರವರೆಗಿನ ಮಾರ್ಗಸೂಚಿಗಳನ್ನು ಅನುಸರಿಸಿ, ನೇ ಸಾಲಿನ ವರ್ಗಾವಣೆಗಳನ್ನು ಜಾರಿಗೊಳಿಸುವಂತೆ ಉಲ್ಲೇಖ(4)ರ ಸರ್ಕಾರದ ಆದೇಶದಲ್ಲಿ ತಿಳಿಸಲಾಗಿದೆ. ಉಲ್ಲೇಖಿತ (1) ರಿಂದ (4) ರವರೆಗಿನ ಸರ್ಕಾರದ ಆದೇಶಗಳಲ್ಲಿನ ಸೂಚನೆಗಳು ಹಾಗೂ ಮಾರ್ಗ ಸೂಚಿಗಳನ್ವಯ 2015-16ನೇ ಸಾಲಿನಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆಯ ಬೆಂಗಳೂರು ಆಯುಕ್ತಾಲಯದ ಆಡಳಿತ ವ್ಯಾಪ್ತಿಯಲ್ಲಿ ಬರುವ ಕಛೇರಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕೇತರ ಅಧಿಕಾರಿ ಹಾಗೂ ಸಿಬ್ಬಂದಿಗಳ ವಗಾವಣೆಗಳನ್ನು ಸಕ್ಷಮ ಪ್ರಾಧಿಕಾರಿಯವಾರು ಆಯಾಯ ಕಛೇರಿಗಳಲ್ಲಿ ವರ್ಗಾವಣೆಯನ್ನು ಕೌನ್ಸಿಲಿಂಗ್ ಮೂಲಕ ಮಾಡುವ ಬಗ್ಗೆ ಈ ಕಛೇರಿಯ ಉಲ್ಲೇಖಿತ (5) ರಲ್ಲಿನ ಸುತ್ತೋಲೆಯಲ್ಲಿ ಸೂಚನೆಗಳನ್ನು ನೀಡಲಾಗಿದೆ.

ಸಾರ್ವಜನಿಕ ಶಿಕ್ಷಣ ಇಲಾಖೆಯ ಅಂತರ ಆಯುಕ್ತಾಲಯದ ವರ್ಗಾವಣೆಯಡಿ ಧಾರವಾಡ ಮತ್ತು ಗುಲಬರ್ಗಾ ಆಯುಕ್ತಾಲಯದಡಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಬೋಧಕೇತರ ಸಿಬ್ಬಂಧಿಗಳು ಬೆಂಗಳೂರು ಆಯುಕ್ತಾಲಯದ ವ್ಯಾಪ್ತಿಯಡಿಯಲ್ಲಿ ವರ್ಗಾವಣೆಯನ್ನು ಕೋರಿರುವರಿಗೆ ವರ್ಗಾವಣೆಯನ್ನು ಮಾಡಲು ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ರವರು ಪ್ರಾಧಿಕಾರವನ್ನು ಹೊಂದಿದ್ದು, 2015-16ನೇ ಸಾಲಿನಲ್ಲಿ ವರ್ಗಾವಣೆಗೆ ಕೋರಿ ಅರ್ಜಿ ಸಲ್ಲಿಸಿರುವ ಅಧಿಕಾರಿಗಳು ಹಾಗೂ ಸಿಬ್ಬಂದಿಗಳ ಪೈಕಿ ಅರ್ಹರಿರುವರ ಅಂತಿಮ ಆಧ್ಯತಾ ಪಟ್ಟಿಯನ್ನು ಪ್ರಕಟಿಸಲಾಗಿದ್ದು, ಸದರಿ ಅಂತಿಮ ಆದ್ಯತಾ ಪಟ್ಟಿಯನ್ವಯ ದಿನಾಂಕ:02-05-2015 ರಂದು ಸ್ಥಳ ಆಯ್ಕೆಗಾಗಿ ಕೌನ್ಸಿಲಿಂಗ್ ನಡೆಸಲಾಗಿದೆ. ದಿನಾಂಕ:02-05-2015ರಂದು ನಡೆದ ಗಣಕೀಕೃತ ಸ್ಥಳ ಆಯ್ಕೆ ಪ್ರಕ್ರಿಯೆಯಲ್ಲಿ ಬೋಧಕೇತರ ವರ್ಗದ ಸಿಬ್ಬಂದಿಗಳು ಖುದ್ದಾಗಿ ಹಾಜರಾಗಿ ವರ್ಗಾವಣೆಗೆ ಸ್ಥಳವನ್ನು ಆಯ್ಕೆ ಮಾಡಿಕೊಂಡಿರುತ್ತಾರೆ. ಅದರಂತೆ ವರ್ಗಾವಣೆಮಾಡಿ ಸ್ಥಳ ನಿಯುಕ್ತಿಗೊಳಿಸಲು ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

ಆದೇಶ:-

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಕೆಳಕಂಡ ಬೋಧಕೇತರ ವೃಂದದ ಸಿಬ್ಬಂಧಿಗಳನ್ನು ಅವರ ಹೆಸರಿನ ಮುಂದೆ ಸೂಚಿಸಿರುವ ಹುದ್ದೆ ಮತ್ತು ಸ್ಥಳಗಳಿಗೆ ಕೆಳಕಂಡ ಷರತ್ತಿಗೊಳಪಟ್ಟು ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ವರ್ಗಾಯಿಸಿ ಆದೇಶಿಸಿದೆ.

| ಕ್ರಮ ಸಂಖ್ಯೆ | ಅಧಿಕಾರಿಗಳ/ ಸಿಬ್ಬಂಧಿಯ ಹೆಸರು, ಹುದ್ದೆ ಮತ್ತು ವಿಳಾಸ ಶ್ರೀ / ಶ್ರೀಮತಿ | ಸ್ಥಳ ಆಯ್ಕೆ ಪ್ರಕ್ರಿಯೆಯಲ್ಲಿ ಆಯ್ಕೆ ಮಾಡಿ ಕೊಂಡಂತೆ ವರ್ಗಾವಣೆ ಮಾಡಿರುವ ಹುದ್ದೆ ಮತ್ತು ಸ್ಥಳ |
|---|---|---|
| | **ಪ್ರಥಮ ದರ್ಜೆ ಸಹಾಯಕರು** | |
| 1 | ಶಾರದಾ ಎನ್.ಭಟ್, ಪ್ರ.ದ.ಸ, ಅಪರ ಆಯುಕ್ತರ ಕಛೇರಿ, ಧಾರವಾಡ | ಸರ್ಕಾರಿ ಪ್ರೌಢಶಾಲೆ, ಪಡಂಗಡಿ, ಬೆಳ್ತಂಗಡಿ ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ |
| 2 | ಕವಿತಾ ಯಣಗೂರ, ಪ್ರ.ದ.ಸ, ಅಪರ ಆಯುಕ್ತರ ಕಛೇರಿ, ಕಲಬುರಗಿ | ಸರ್ಕಾರಿ ಪ್ರೌಢಶಾಲೆ, ಹೆಸರಘಟ್ಟ, ಬೆಂಗಳೂರು ಉತ್ತರ ಜಿಲ್ಲೆ |
| | **ದ್ವಿತೀಯ ದರ್ಜೆ ಸಹಾಯಕರು** | |
| 1 | ಕು;ಮಮತಾ.ಎಸ್.ವಿ, ದ್ವಿ.ದ.ಸ, ಸ.ಪ್ರೌ.ಶಾ, ಸಂಗನೋಡಿ, ರಾಯಚೂರು ಜಿಲ್ಲೆ | ಸರ್ಕಾರಿ ಪ್ರೌಢಶಾಲೆ, ನಾಗವಳ್ಳಿ, ಸಾಗರ ತಾಲ್ಲೂಕು, ಶಿವಮೊಗ್ಗ ಜಿಲ್ಲೆ |
| 2 | ಹೆಚ್.ಜಿ.ಕೃಷ್ಣಮೂರ್ತಿ, ದ್ವಿ.ದ.ಸ, ಸರ್ಕಾರಿ ಪ್ರೌಢಶಾಲೆ, ಸಂಗಳ, ರಾಮದುರ್ಗ ತಾಲ್ಲೂಕು, ಬೆಳಗಾವಿ ಜಿಲ್ಲೆ | ಸ.ಪ.ಪೂ.ಕಾ [ಪ್ರೌ.ಶಾ.ವಿ] ಉಪ್ಪಿನಂಗಡಿ, ದಕ್ಷಿಣ ಕನ್ನಡ ಜಿಲ್ಲೆ |
| 3 | ಹೇಮಾವತಿ ಗೋಪಾಲ ನಾಯಕ, ದ್ವಿ.ದ.ಸ, ಸರ್ಕಾರಿ ಪ್ರೌಢಶಾಲೆ, ಚಿಲಕಮುಖಿ, ಕೊಪ್ಪಳ ಜಿಲ್ಲೆ | ಸರ್ಕಾರಿ ಬಾಲಕರ ಪ.ಪೂ.ಕಾ [ಪ್ರೌ.ಶಾ.ವಿ] ಕೆ.ಜಿ.ಎಫ್, ಕೋಲಾರ ಜಿಲ್ಲೆ |
| 4 | ಮುನಿಹನುಮಪ್ಪ ಎ.ಎಂ, ದ್ವಿ.ದ.ಸ, ಸರ್ಕಾರಿ ಪ್ರೌಢಶಾಲೆ, ಬಳಗೇರಿ, ಯಲಬುರ್ಗಾ ತಾಲ್ಲೂಕು, ಕೊಪ್ಪಳ ಜಿಲ್ಲೆ | ಸರ್ಕಾರಿ ಪದವಿ ಪೂರ್ವ ಕಾಲೇಜು, ಅಂಗೊಂಡಹಳ್ಳಿ, ಮುಳಬಾಗಿಲು ತಾಲ್ಲೂಕು |
| | **ದ್ವಿತೀಯ ದರ್ಜೆ ಸಹಾಯಕರು [ಪರಸ್ಪರ]** | |
| 1 | ಮಹಾವೀರ ಚಂದ್ರಪ್ಪ ದೇವಮುಷಿ, ದ್ವಿ.ದ.ಸ, ಸರ್ಕಾರಿ ಪ್ರೌಢಶಾಲೆ, ಕಾಯರ್ತಡ್ಕ, ಬೆಳ್ತಂಗಡಿ ತಾಲ್ಲೂಕು | ಸರ್ಕಾರಿ ಉರ್ದು ಪ್ರೌಢಶಾಲೆ, ಸದಲಗಾ, ಚಿಕ್ಕೋಡಿ ತಾಲ್ಲೂಕು, ಬೆಳಗಾವಿ ಜಿಲ್ಲೆ |
| | ಅನಂತಕುಮಾರ.ಹೆಚ್.ಟಿ, ದ್ವಿ.ದ.ಸ, ಸರ್ಕಾರಿ ಉರ್ದು ಪ್ರೌಢಶಾಲೆ, ಸದಲಗಾ, ಚಿಕ್ಕೋಡಿ ತಾಲ್ಲೂಕು, ಬೆಳಗಾವಿ ಜಿಲ್ಲೆ | ಸರ್ಕಾರಿ ಪ್ರೌಢಶಾಲೆ, ಕಾಯರ್ತಡ್ಕ, ಬೆಳ್ತಂಗಡಿ ತಾಲ್ಲೂಕು |

ಷರತ್ತುಗಳು:-

1. ಅಂತರ ಆಯುಕ್ತಾಲಯ ವರ್ಗಾವಣೆಯನ್ನು ಸಿಬ್ಬಂದಿಗಳ ಕೋರಿಕೆ ಆಧಾರದ ಮೇರೆಗೆ ವರ್ಗಾವಣೆ ಮಾಡಿರುವುದರಿಂದ ಅವರ ಜೇಷ್ಠತೆಯನ್ನು ಬೆಂಗಳೂರು ಆಯುಕ್ತಾಲಯದಡಿ ಕರ್ತವ್ಯಕ್ಕೆ ಹಾಜರಾದ ದಿನಾಂಕದಿಂದ ಪರಿಗಣಿಸಲಾಗುವುದು.
2. ಕೋರಿಕೆ ವರ್ಗಾವಣೆಯಾಗಿರುವುದರಿಂದ ವರ್ಗಾವಣೆಗೊಂಡ ಅಧಿಕಾರಿಗಳು/ ಸಿಬ್ಬಂದಿಗಳು ಯಾವುದೇ ರೀತಿಯ ವರ್ಗಾವಣೆ ಭತ್ಯೆ ಹಾಗೂ ಸೇರುವಿಕೆ ಕಾಲಕ್ಕೆ ಅರ್ಹರಿರುವುದಿಲ್ಲ.
3. ಅಧಿಕಾರಿಗಳ/ಸಿಬ್ಬಂದಿಗಳ ಕೋರಿಕೆ ಮೇರೆಗೆ ವರ್ಗಾವಣೆಗೆ ಅವಕಾಶ ನೀಡಿ ಗಣಕೀಕೃತ ಕೌನ್ಸಿಲಿಂಗ್ ಮೂಲಕ ಸ್ಥಳನಿಯುಕ್ತಿ ಮಾಡಲಾಗಿದ್ದು, ಯಾವುದೇ ಸ್ಥಳ ಮಾರ್ಪಾಡಿಗೆ ಅವಕಾಶವಿರುವುದಿಲ್ಲ.
4. ವರ್ಗಾವಣೆ ಹೊಂದಿರುವ ಅಧಿಕಾರಿಗಳ / ಸಿಬ್ಬಂದಿಗಳು ಕರ್ತವ್ಯದಿಂದ ಬಿಡುಗಡೆ ಹೊಂದುವ ಪೂರ್ವದಲ್ಲಿ ಸಂಬಂಧಿಸಿದ ನಿಯಂತ್ರಣಾಧಿಕಾರಿಗಳು/ಉಪನಿರ್ದೇಶಕರು(ಆಡಳಿತ) ರವರ ಅನುಮತಿ ಪಡೆದು ಈ ಆದೇಶ ಹೊರಡಿಸಿದ ದಿನಾಂಕದಿಂದ 15 ದಿನಗಳ ಒಳಗಾಗಿ ಬಿಡುಗಡೆ ಹೊಂದಲು ತಿಳಿಸಿದೆ.
5. ವರ್ಗಾವಣೆ ಹೊಂದಿರುವ ಅಧಿಕಾರಿಗಳು/ಸಿಬ್ಬಂಧಿಗಳು ಕರ್ತವ್ಯದಿಂದ ಬಿಡುಗಡೆ ಹೊಂದಿದ ಹಾಗೂ ಕರ್ತವ್ಯಕ್ಕೆ ಹಾಜರಾದ ಬಗ್ಗೆ ಕೂಡಲೇ ಈ ಕಛೇರಿಗೆ ಮತ್ತು ಸಂಬಂಧಿಸಿದ ಎಲ್ಲಾ ಮೇಲಾಧಿಕಾರಿಗಳಿಗೆ ವರದಿ ಮಾಡುವುದು.

6. ವರ್ಗಾವಣೆ ಅರ್ಜಿಯಲ್ಲಿ ತಪ್ಪು ಮಾಹಿತಿ ನೀಡಿದ್ದಲ್ಲಿ ಅಂತಹ ಅಧಿಕಾರಿ/ಸಿಬ್ಬಂದಿಯನ್ನೇ ಪೂರ್ಣ ಜವಾಬ್ದಾರರನ್ನಾಗಿ ಪರಿಗಣಿಸಿ, ತಪ್ಪು ಮಾಹಿತಿ ನೀಡಿದ ಕಾರಣಕ್ಕಾಗಿ ಅವರ ಮೇಲೆ ಸೂಕ್ತ ಶಿಸ್ತಿನ ಕ್ರಮ ಕೈಗೊಳ್ಳಲಾಗುವುದು.
7. ಸದರಿ ಅಧಿಕಾರಿಗಳು / ನೌಕರರು ವರ್ಗಾವಣೆಗೆ ನೀಡಿರುವ ಕಾರಣದಂತೆ ಕೌನ್ಸಿಲಿಂಗ್‌ನಲ್ಲಿ ಆದ್ಯತೆಯನ್ನು ನೀಡಲಾಗಿದ್ದು, ಸದರಿಯವರು ಸ್ಥಳ ಆಯ್ಕೆ ಪ್ರಕ್ರಿಯೆಯ ಮುಖೇನ ಸ್ಥಳ ಆಯ್ಕೆ ಮಾಡಿಕೊಂಡಿರುತ್ತಾರೆ. ಆದ್ಯತೆಯಲ್ಲಿ ವ್ಯತ್ಯಾಸವಿದ್ದಲ್ಲಿ ಅವರನ್ನು ಬಿಡುಗಡೆಗೊಳಿಸದೇ ಈ ಕಛೇರಿಗೆ ವರದಿ ಮಾಡಲು ತಿಳಿಸಿದೆ.
8. ಚುನಾವಣಾ ನೀತಿ ಸಂಹಿತೆಯು ಜಾರಿ ಇರುವ ಪ್ರದೇಶಗಳಲ್ಲಿ ಸಂಬಂಧಿಸಿದ ಚುನಾವಣಾ ಪ್ರಾಧಿಕರಿಗಳಿಂದ ಬಿಡುಗಡೆ ಮಾಡುವ ಬಗ್ಗೆ ಖಾತ್ರಿ ಪಡಿಸಿಕೊಂಡು ವರ್ಗಾವಣೆಗೊಂಡ ಅಧಿಕಾರಿ / ಸಿಬ್ಬಂದಿಗಳನ್ನು ಅವರ ಪ್ರಸ್ತುತ ಸ್ಥಳದಿಂದ ಬಿಡುಗಡೆ ಮಾಡಲು ತಿಳಿಸಿದೆ.

(ಮೊಹಮ್ಮದ್ ಮೊಹಸಿನ್)
ಆಯುಕ್ತರು
ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು

ಇವರಿಗೆ :-

1. ಸಂಬಂಧಿಸಿದ ಶಾಲಾ / ಕಾಲೇಜು / ಕಛೇರಿ ಮುಖ್ಯಸ್ಥರಿಗೆ,
2. ಸಂಬಂದಿಸಿದ ಆದಿಕಾರಿ / ಸಿಬ್ಬಂದಿಗಳಿಗೆ

ಪ್ರತಿಯನ್ನು:-

3. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ, ಶಿಕ್ಷಣ ಇಲಾಖೆ ಬಹುಮಡಿ ಕಟ್ಟಡ, ಬೆಂಗಳೂರು
4. ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ, ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ ಬೆಂಗಳೂರು
5. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಗುಲಬರ್ಗಾ ಹಾಗೂ ಧಾರವಾಡ.
6. ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ನಿರ್ದೇಶಕರುಗಳಿಗೆ.
7. ಸಂಬಂಧಿಸಿದ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ.
8. ವಿಭಾಗೀಯ ಕಾರ್ಯದರ್ಶಿಗಳು ಹಾಗೂ ಪದನಿಮಿತ್ತ ಸಹ ನಿರ್ದೇಶಕರು, ಕರ್ನಾಟಕ ಪ್ರೌಢ ಶಿಕ್ಷಣ ಪ್ರಾದೇಶಿಕ ಪರೀಕ್ಷಾ ಮಂಡಳಿ. ಮೈಸೂರು, ಬೆಳಗಾವಿ ಹಾಗೂ ಗುಲಬರ್ಗಾ.
9. ಸಹ ನಿರ್ದೇಶಕರು, ಮಧ್ಯಾಹ್ನ ಉಪಹಾರ ಯೋಜನೆ, ಕೆ.ಜಿ.ರಸ್ತೆ, ಬೆಂಗಳೂರು.
10. ಸಹ ನಿರ್ದೇಶಕರು-1 ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.
11. ಸಂಬಂಧಿಸಿದ ಸಿ.ಟಿ.ಇ ಪ್ರಾಂಶುಪಾಲರುಗಳಿಗೆ.
12. ಸಾರ್ವಜನಿಕ ಶಿಕ್ಷಣ ಇಲಾಖೆಯ ಸಂಬಂಧಿಸಿದ ಜಿಲ್ಲಾ ಉಪ ನಿರ್ದೇಶಕರಿಗೆ (ಆಡಳಿತ)
13. ಸಂಬಂದಿಸಿದ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸ-ಂಸ್ಥೆಯ ಪ್ರಾಂಶುಪಾಲರಿಗೆ
14. ಸಂಬಂಧಿಸಿದ ತಾಲ್ಲೂಕು ಪಂಚಾಯತಿ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳಿಗೆ.
15. ಮಾನ್ಯ ಆಯುಕ್ತರ ಆಪ್ತ ಕಾರ್ಯದರ್ಶಿಗಳಿಗೆ ಮಾಹಿತಿಗಾಗಿ.
16. ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ.
17. ಸಮಬಂದಿಸಿದ ಶಾಲಾ / ಕಾಲೇಜುಗಳ ಮುಖ್ಯಸ್ಥರುಗಳಿಗೆ
18. ಕಛೇರಿ ಪ್ರತಿ